ಇ) ಜಿಲ್ಲಾಧಿಕಾರಿಯವರು 1992ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಉಂಟಾದ ಹಾನಿಯ ದುರಸ್ತಿ ಸಲುವಾಗಿ ಕೆಳಕಾಣಿಸಿದ ಇಲಾಖೆಗಳಿಗೆ ಹಣವನ್ನು ಈ ತಾಲ್ಲೂಕಿಗೆ ಬಿಡುಗಡೆ ಮಾಡಲಾಗಿದೆ.

(ರೂ. ಲಕ್ಷಗಳಲ್ಲಿ)

1) ಜಿಲ್ಲಾ ಪರಿಷತ್ತು	-	2.00
2) ಲೋಕೋಪಯೋಗಿ ಇಲಾಖೆ	-	2.05
3) ಸಣ್ಣ ನೀರಾವರಿ ಇಲಾಖೆ	-	7.00
ಒಟ್ಟು		**11.05 ಲಕ್ಷ**

ತುಮಕೂರು ಜಿಲ್ಲೆಯಲ್ಲಿ ಅಕ್ರಮ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ.

618 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ, ಸದರಿ ಜಮೀನನ್ನು ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಸಕ್ರಮಗೊಳಿಸಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟ ಜನರಿಗೆ ಹಕ್ಕುಪತ್ರ ವಿತರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 90,206

ಆ) ಹೌದು. ದಿನಾಂಕ 30 -11-1992ರವರೆಗೆ 2,616 ಅರ್ಜಿಗಳನ್ನು ಸಕ್ರಮಗೊಳಿಸಲಾಗಿದೆ.

ಇ) 195

ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಹೆಚ್ಚು ಅಂಕಗಳು.

224(ಬಿ)-ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿ ಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?

ಆ) ಆವ್ಯಗಳಲ್ಲಿ ಸರ್ವೇಯರ್ ಹುದ್ದೆಯಲ್ಲಿ ಕಂದಾಯ ಇಲಾಖೆಯಲ್ಲಿ ಯಾವ ರೀತಿ ಸೇರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಅಭ್ಯರ್ಥಿಗಳಿಗೆ ಒಟ್ಟು 15 ಅಂಕಗಳನ್ನು ಮಾತ್ರಸೇರಿಸಲಾಗುವುದು.

ಆ) ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಶೇಕಡಾವಾರು ಪಡೆದಿರುವ ಅಂಕಗಳ ಶೇಕಡಾ 80ಅಂಕಗಳನ್ನು ಮತ್ತು ಸಂದರ್ಶನದಲ್ಲಿ ಪಡೆದಿರುವ ಗರಿಷ್ಟ 20 ಅಂಕಗಳವರೆಗೆ ಹಾಗೂ ಗ್ರಾಮಾಂತರ ಅಭ್ಯರ್ಥಿಯಾದಲ್ಲಿ ಅರ್ಹವಿರುವ ಮಾನ್ಯತೆಯ 15 ಅಂಕಗಳನ್ನು ಸೇರಿಸಲಾಗಿದೆ.